ಆಧುನಿಕ ಕನ್ನಡ ಕಥನಗಳಲ್ಲಿ ವಸ್ತು ಮತ್ತು ತಂತ್ರ

ರವಿ ಬಸವರಾಜ ಸಣಕಂಬಿ

ಪ್ರಾದೇಶಿಕತೆಯನ್ನು ನಿರ್ಧರಿಸಲು ಮುಖ್ಯವಾಗಿ ಸಾಹಿತ್ಯ ರಚನೆಗೊಂಡ ಲೇಖಕನ ಭೌಗೋಳಿಕತೆ, ಭಾಷಿಕತೆ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಗಮನಿಸ ಬಹುದಾಗಿದೆ. ಕನ್ನಡದ ಕಥನ ಕಲೆಯು ಆರಂಭಗೊಂಡುದೇ ಇಂತಹದೊಂದು ವಿಶಿಷ್ಟವಾದ ಅಂಶದಿಂದಲೇ ಎಂದು ವಿಮರ್ಶಕರು ಗುರುತಿಸಿದ್ದಾರೆ. ಕನ್ನಡದ ಪ್ರಥಮ ಕಾದಂಬರಿ ಇಂದಿರಾಬಾಯಿ ಸೃಷ್ಟಿಗೊಂಡ ಕ್ರಮ ಕೂಡಾ ಪ್ರಾದೇಶಿಕತೆಯ ನೆಲೆಯಲ್ಲಿಯೇ ಆಗಿರುವುದೊಂದು ವಿಶೇಷ. ಕನ್ನಡದಲ್ಲಿ ರೂಪು ತಳೆದ ಕಾದಂಬರಿ ಪ್ರಕಾರಕ್ಕಾಗಲಿ, ಸಣ್ಣಕಥೆಯ ಪ್ರಕಾರಕ್ಕಾಗಲಿ ಪಾಶ್ಚಾತ್ಯ ಸಾಹಿತ್ಯಿಕ ರೂಪಗಳೇ ಕಾರಣವಾದರೂ ಕಾಲ ಮತ್ತು ಸಾಮಾಜಿಕ ಸಂದರ್ಭದ ದೃಷ್ಟಿಯಿಂದ ಇವು ಸ್ವಲ್ಪವಾದರೂ ಆ ಪ್ರಕಾರಗಳಿಗೆ ಭಿನ್ನವಾಗಿವೆ. ಏಕೆಂದರೆ ವಸಾಹತು ಸಂದರ್ಭದಲ್ಲಿ ಪಾಶ್ಚಾತ್ಯ ಸಂಸ್ಕೃತಿಯನ್ನು ವಿರೋಧಿಸುವ ಮತ್ತು ದೇಶೀ ನೆಲೆಗಳಿಗಾಗಿ ಹುಡುಕಾಟ ನಡೆಸುವ ಜರೂರತ್ತು ಬಹುತೇಕ ಎಲ್ಲಾ ದೇಶೀಯ ಲೇಖಕರಿಗಿತ್ತು. ''ಪಾಶ್ಚಾತ್ಯ ನಾವೆಲ್‌ನ ಮೀಮಾಂಸೆಯ ತಾತ್ವಿಕ ತಿಳುವಳಿಕೆಯಿಂದ ಹೊರಟು ಕನ್ನಡದಲ್ಲಿ ಈ ಪ್ರಕಾರವು ತಳೆಯುವ ರೂಪವನ್ನು ವಿವರಿಸಲು ಯತ್ನಿಸಲಾಗಿದೆ. ಹೀಗೆ ಹೇಳಿದರೆ ಕನ್ನಡ ಕಾದಂಬರಿಯು ನಾವೆಲ್‌ನ ನಕಲು ಎಂದು ಅರ್ಥವಲ್ಲ. ಸಾಂಸ್ಕೃತಿಕ ರೂಪಗಳ ಬೇರು ತಳೆಯುವಿಕೆ ಮತ್ತು ಎರಡು ಭಾಷೆಗಳ ನಡುವಣ ಸಾಂಸ್ಕೃತಿಕ ಅವಸ್ಥಾಂತರಗಳ ಚಾರಿತ್ರಿಕ ಸಂದರ್ಭದ ಒಡಲಿನಿಂದ ತಲೆಯೆತ್ತಿದ ಕಾದಂಬರಿಯ ಮೂಲದ್ರವ್ಯ ಇಲ್ಲಿನದೇ ಅದನ್ನು ಕಟ್ಟಲು ಒದಗುವ ಭಾಷೆ, ಉಪಮೆ, ರೂಪಕ, ಶೈಲಿ, ಜೀವನಕತೆಯೂ ಈ ಸಂಸ್ಕೃತಿಯದು. ಇನ್ನೂ ಖಚಿತವಾಗಿ ಹೇಳಬೇಕಾದರೆ ಕಾದಂಬರಿ ಬರವಣಿಗೆಯ ಮೂಲಕ ಆಧುನಿಕ ಸಂಸ್ಕೃತಿಯ ನಿರೂಪಣೆ ನಡೆಯಿತು. ಈ ವ್ಯತ್ಯಾಸದ ತಿಳಿವು ನಮ್ಮ ಅಧ್ಯಯನಕ್ಕೆ ಮುಖ್ಯ. ಕಾದಂಬರಿಗೆ ನಾವೆಲ್‌ನೊಂದಿಗೆ ಸಂಬಂಧವಿದೆ. ಆದರೆ ನಾವೆಲ್ ನೆಂಟನಾಗಿಯೂ ಕಾದಂಬರಿ ಭಿನ್ನ ರಚನೆ. ಕಾದಂಬರಿಯನ್ನು ಸಾಧ್ಯ ಮಾಡಿದ ಸಾಮಾಜಿಕ ಸನ್ನಿವೇಶದಲ್ಲಿಯೇ ಅದನ್ನು ವಿವರಿಸಿಕೊಳ್ಳಬೇಕು.'' ಎನ್ನುವ ಅಭಿಪ್ರಾಯವೂ ಇದೆ. ಹಾಗೆ ನೋಡಿದರೆ ಇಲ್ಲಿನ ವಾದದ ಪ್ರಕಾರ ಕನ್ನಡದಲ್ಲಿ ರೂಪುಗೊಂಡ ಕಥನವೆಲ್ಲಾ ಪಾಶ್ಚಾತ್ಯ ಕಥನ ಕ್ರಮಕ್ಕಿಂತ ಭಿನ್ನವಾದುದೆಂದು ಹೇಳಬೇಕಾಗುತ್ತದೆ. ಇದು ಎಷ್ಟರಮಟ್ಟಿಗೆ ಸರಿಯೋ ತಪ್ಪೋ, ಆದರೆ ಇದರಿಂದ ಒಂದಂಶವಂತೂ ಸ್ಪಷ್ಟವಾಗುತ್ತದೆ. ಕಥನವು ಹುಟ್ಟುವ ಸಾಮಾಜಿಕ ಸನ್ನಿವೇಶದಲ್ಲಿ ಆ ಕಥನವನ್ನು ವಿವರಿಸಿಕೊಳ್ಳಬೇಕು ಎಂದಾದರೆ ಪ್ರಾದೇಶಿಕತೆಯ ಸೊಗಡಿನಲ್ಲಿ ಅರಳಿದ ಎಲ್ಲ ಕಥನಗಳಿಗೂ ಅದರದ್ದೇ ಆದ ಸಾವಯವ ಬಂಧವೊಂದು ಇರುತ್ತದೆ ಎಂಬುದು.

ಪಾರಂಪರಿಕ ಮೌಲ್ಯಗಳಲ್ಲಿನ ಒಳಿತನ್ನು ಪ್ರತಿಪಾದಿಸುವ ಹಾಗೆಯೇ ಇಂಗ್ಲಿಷ್ ಶಿಕ್ಷಣದ ಮೂಲಕ ಪಡೆದ ಸಂಸ್ಕಾರದೊಂದಿಗೆ ಪ್ರಗತಿಶೀಲತೆಯನ್ನು ಪ್ರತಿಪಾದಿಸುವ ತುರ್ತು ಆರಂಭದ ಲೇಖಕರಿಗೆ ಇದ್ದಂತಿದೆ. ಹಾಗಾಗಿಯೇ ಗುಲ್ವಾಡಿ ವೆಂಕಟರಾಯರ ಇಂದಿರಾಬಾಯಿ ಕಾದಂಬರಿಯು ಭಾರತೀಯ ಸಂಸ್ಕೃತಿಯ ದಟ್ಟವಿವರಗಳನ್ನು ನೀಡುತ್ತಲೇ ಆಧುನಿಕತೆಯ ಒಳಿತಿನ ''ಪ್ರಾದೇಶಿಕತೆಯೆನ್ನುವುದು ಒಂದು ಪ್ರದೇಶದ ಭೌಗೋಳಿಕ ಹಿನ್ನೆಲೆ, ಭಾಷಿಕತೆ, ಸಮಾಜದ ಆಚರಣೆಗಳು, ಸಾಂಸ್ಕೃತಿಕ ಅಂಶಗಳು ಮುಖ್ಯವಾಗಿ ಕಂಡುಬರುತ್ತವೆ. ಈ ಪ್ರಾದೇಶಿಕ ಅಂಶಗಳು ತನ್ನ ಪರಿಸರ ಪ್ರಪಂಚವನ್ನು ಮತ್ತೊಂದು ಪರಿಸರ ಪ್ರಪಂಚದಿಂದ ಪ್ರತ್ಯೇಕಗೊಳಿಸುತ್ತದೆ. ಆದರೆ ಮಾನವೀಯ ಮೌಲ್ಯಗಳು ಎಲ್ಲೆಡೆ ಕೆಲಸ ಮಾಡುತ್ತಿರುತ್ತವೆ.'' ಎಂದು ಹೇಳಲಾಗುತ್ತದೆ.

ಆಧುನಿಕ ಕನ್ನಡದ ಕಥನ ಕಲೆಗೆ ಮುಖ್ಯ ಪ್ರೇರಣೆ ಪಾಶ್ಚಾತ್ಯ ಸಾಹಿತ್ಯವೇ ಆದರೂ ರಾಷ್ಟ್ರೀಯತೆಯ ಕುರಿತಾದ ಇದ್ದ ಆಗಿನ ಪರಿಕಲ್ಪನೆ ಮತ್ತು ದೇಶ, ಭಾಷೆ, ಪ್ರಾಂತ್ಯದ ಬಗೆಗೆ ಇರುವ ಸಾವಯವ ಸಂಬಂಧ ಇವೆಲ್ಲವುಗಳಿಂದಾಗಿ ಪಾಶ್ಚಾತ್ಯ ಜಗತ್ತಿನ ಜೀವನ ವಿಧಾನ ಸಾಹಿತ್ಯದ ಕುರಿತಾದ ನಂಬಿಕೆಗಳು, ಸಾಹಿತ್ಯಕ ರೂಪಗಳ ಪ್ರಭಾವ ಇವು ಕನ್ನಡದ ಕಥನ ಸ್ವರೂಪವನ್ನು ನಿರ್ಧರಿಸುವ ಪ್ರಮುಖ ಅಂಶಗಳಾದವು. ಕಥನ ಕಲೆಯ ಮುಖ್ಯ ಮಾಧ್ಯಮವಾದ ಕಾದಂಬರಿಯ ಸ್ವರೂಪವನ್ನು ಈ ರೀತಿಯಾಗಿ ಗುರುತಿಸಬಹುದು. ''ನಾವೆಲ್ ಎನ್ನುವುದು ಜನಪದ ಸಾಹಸ ಕತೆಗಳ ಒಂದು ಪ್ರಬೇಧ ಕೂಡ ಹೌದು. ಅರೇಬಿಯನ್ ನೈಟ್ಸ್, ಸಿಂದಾಬಾದನ ಸಾಹಸಯಾತ್ರೆ ಮೊದಲಾದ ಕಥನಗಳು ಈ ಪ್ರಕಾರದಲ್ಲಿ ಬರುತ್ತವೆ. ಇವುಗಳ ವೈಶಿಷ್ಟ್ಯವೆಂದರೆ ಪಾತ್ರಗಳ ಕ್ರಿಯೆಯ ವಾಸ್ತವ ಪ್ರಪಂಚದಲ್ಲಿ ನಿರ್ದಿಷ್ಟ ಕಾಲ ಮತ್ತು ನಿರ್ದಿಷ್ಟ ಸ್ಥಳಗಳಲ್ಲಿ ನಡೆಯುವುದು. ಈ ಕಾಲ ಹಳೆಯ ಕತೆಗಳ ಕಾಲವಲ್ಲ. ತನ್ನ ಘಟನಾ ನಿರ್ದಿಷ್ಟತೆಯಿಂದಾಗಿ ಇದು ಕಾದಂಬರಿಯ ನಾವೆಲ್‌ನ ಲಕ್ಷಣವೂ ಹೌದು ಸಾಂಪ್ರದಾಯಿಕ ಕಥನಗಳಿಂದ ಭಿನ್ನವಾಗುವ ನಾವೆಲ್ಲಾ ಹೊಸದು. ಆದರೆ ನಾವೆಲ್ ನಾವೆಲ್ಲಾಗಿಂತ ಬೇರೆಯಾದ ರಚನೆ. ಸಂಕೀರ್ಣವಾದ ಕಥಾಸಂವಿಧಾನವನ್ನೂ ವಾಸ್ತವಿಕ ಜೀವನವನ್ನೂ ಪ್ರತಿನಿಧಿಸುವ ಪಾತ್ರ ಮತ್ತು ಘಟನೆಗಳನ್ನು ಅದು ಹೊಂದಿರಬೇಕು. ಆದುದರಿಂದ ತನ್ನ ಲಕ್ಷಣದಲ್ಲಿ ನಾವೆಲ್ ಪಾತ್ರ ಚಿತ್ರಣ, ಕಥಾ ಸಂವಿಧಾನಗಳನ್ನು ಹೊಂದಿದ, ವಾಸ್ತವಿಕ ನಿರೂಪಣೆಯುಳ್ಳ ಕಾಲ್ಪನಿಕ ರಚನೆ. ಭೂತ ಯಾ ವರ್ತಮಾನ ಕಾಲದ ಚಿತ್ರಣವಿರುವ ಸುದೀರ್ಘ ಕಥನ.''

ಮೂಲಭೂತವಾಗಿ ಕಾದಂಬರಿಯೊಂದರ ಕೇಂದ್ರ ಅದರ ಕಥನವಾಗಿದೆ. ಅದರ ಕಥಾ ಸಂವಿಧಾನವನ್ನು ಓ.ಎಲ್.ನಾಗಭೂಷಣ ಸ್ವಾಮಿಯವರು ಹೀಗೆ ವಿವರಿಸುತ್ತಾರೆ: ಸಂವಿಧಾನದ ಯಾವುದೇ ವಿವರಣೆ ಪಾತ್ರ ಮತ್ತು ಕ್ರಿಯೆಯ ಪರಿಕಲ್ಪನೆಯೊಂದಿಗೆ ಬೆರೆತುಕೊಂಡೇ ಇರುವುದು ಅನಿವಾರ್ಯ. ಹಾಗಾಗಿ ಸಂವಿಧಾನವನ್ನು ತೀರ ಅಮೂರ್ತವಾಗಿಯೋ ಅಥವಾ ಕೃತಿಯ ಸಾರಾಂಶ ಎಂದೋ ವಿವರಿಸಲು ಸಾಧ್ಯ. ತೀರ ಸರಳವಾಗಿ ಹೇಳುವುದಾದರೆ, ನಿರ್ದಿಷ್ಟ ಭಾವನಾತ್ಮಕ ಕಲಾತ್ಮಕ ಪರಿಣಾಮಗಳನ್ನು ಸಾಧಿಸಲು ಕ್ರಿಯೆಗಳನ್ನು ಒಂದು ನಿರ್ದಿಷ್ಟ ವ್ಯವಸ್ಥೆಗೆ ಸಕಾರಣವಾಗಿ ಒಳಪಡಿಸಿ ರಚಿಸಿಕೊಂಡಿರುವ ಅಭಿವ್ಯಕ್ತಿ ವಿನ್ಯಾಸ ಕಥಾ ಸಂವಿಧಾನವಾಗಿದೆ.''

ಸಾಂಪ್ರದಾಯಿಕ ಕಥನಗಳು ವಾಸ್ತವಿಕ ಸತ್ಯತಾತ್ವಿಕತೆಗಳನ್ನು ಚಂಚಲ ಬದುಕಿನಲ್ಲಿ ಸ್ಥಿರವಾಗಿರುವ ಸಂಗತಿಗಳೆಂದು ಭಾವಿಸುತ್ತವೆ. ಈ ಕಥನ ಲೇಖಕರ ಪಾಲಿಗೆ ಕೆಲವು ಸರ್ವಕಾಲಿಕ, ವಿಶ್ವಸ್ಥ ಮೌಲ್ಯಗಳಾಗಿವೆ. ಚಂಚಲ ವಾಸ್ತವದಲ್ಲಿ ಇವುಗಳಿಗೆ ಘಾತವೊದಗಿಸಿದರೂ ಈ ಮೌಲ್ಯಗಳನ್ನು ಉಳಿಸಬೇಕು ಎನ್ನುವುದು ಸಾಂಪ್ರಾದಾಯಿಕ ಕಥನಕಾರರ ಧೋರಣೆಯಾಗಿದೆ. ಆದುದರಿಂದ ಸ್ಥಿರ, ಸಾರ್ವಕಾಲಿಕ, ವಿಶ್ವಸ್ಥ ಮೌಲ್ಯಗಳನ್ನು ಪ್ರತಿಪಾದಿಸಲು ವಸ್ತು ಪ್ರಪಂಚದ ಅಶಾಶ್ವತ, ಚಂಚಲ ವಿವರಗಳನ್ನು ಇವರು ಬಳಸಿಕೊಳ್ಳುತ್ತಾರೆ. ನೀತಿ ಬೋಧನೆಗಾಗಿ ವಾಸ್ತವದ ವಿವರಗಳ ಬಳಕೆಯಾಗುತ್ತಿರುವುದರಿಂದ ಕಥೆಯ ಅಂತ್ಯದಲ್ಲಿನ ಮೌಲ್ಯ ವಿಜಯವೇ ಕಥನಗಳ ಪ್ರಧಾನ ಉದ್ದೇಶ. ಆದರೆ ನಾವೆಲ್ ಭಿನ್ನವಾದ ಸೈದ್ಧಾಂತಿಕ ನೆಲೆಯಿಂದ ಹುಟ್ಟುತ್ತದೆ. ನಾವೆಲ್ ಪ್ರಪಂಚದಲ್ಲಿ ನಡೆಯುವ ಘಟನೆಗಳಿಗೆ ಕಾರ್ಯಕಾರಣ ಸಂಬಂಧವಿದೆ. ನಾವೆಲ್, ವಾಸ್ತವದ ಬದುಕಿನ ಮೇಲ್ ನೋಟದ ಅಶಾಶ್ವತ, ಅತಾರ್ಕಿಕ ವಿವರಗಳನ್ನು ತಾರ್ಕಿಕವಾದ ವೈಚಾರಿಕ ವಿನ್ಯಾಸದಲ್ಲಿ ಹಿಡಿದಿಡುತ್ತದೆ. ಅಂದರೆ ಚಂಚಲಶೀಲವಾಗಿರುವ, ಕಾರ್ಯಕಾರಣ ಸಂಬಂಧಿತವಾಗಿ ಬೆಳೆಯುವ, ಬದಲಾಗುವ ಪಾತ್ರ, ಘಟನೆಗಳನ್ನು ನಾವು ನಾವೆಲ್‌ನಲ್ಲಿ ಕಾಣುತ್ತೇವೆ. ಈ ಬದಲಾವಣೆ ಜಡವಾದುದ್ದಲ್ಲ. ಅದು ಸಂಘರ್ಷಕ್ಕೂ ಕಾರಣವಾಗಿರುತ್ತದೆ. ಹೀಗೆ ಸಾಂಪ್ರದಾಯಿಕ ಕಥನವು ಆದರ್ಶವನ್ನು ಸಾಕ್ಷಾತ್ಕರಿಸಲೆಂದೇ ವಿನ್ಯಾಸಗೊಳ್ಳುವ ಸಂಘರ್ಷಹೀನ ರಚನೆಯಾದರೆ, ಆದರ್ಶ ಮತ್ತು ವಾಸ್ತವಗಳ ನಡುವಿನ ಸಂಘರ್ಷವೆನ್ನುವುದು ನಾವೆಲ್‌ನಲ್ಲಿ ಎದ್ದುತೋರುವ ಅಂಶವಾಗಿದೆ. ಕಥಾ ಸಂವಿಧಾನವು ಈ ಸಂಘರ್ಷವನ್ನೂ ಒಳಗೊಂಡಿರುತ್ತದೆ.

ಸಾಂಪ್ರದಾಯಿಕ ಗದ್ಯ ಕಥಾನಕಗಳಲ್ಲಿ ಕುತೂಹಲ ಕೆರಳಿಸುವ ಕಥನಕ್ರಮ ಮುಖ್ಯವಾಗುತ್ತದೆ. ಆದರೆ ನಾವೆಲ್ ತನ್ನ ಆಕೃತಿಯಲ್ಲಿಯೇ ತಾನು ಒಳಗೊಂಡಿರುವ ಘಟನೆಗಳ ತರ್ಕವನ್ನು ಮಂಡಿಸಲು ಯತ್ನಿಸುತ್ತದೆ. ಸಾಂಪ್ರದಾಯಿಕ ಕಥನಗಳಲ್ಲಿ ಘಟನೆ, ಸನ್ನಿವೇಶ, ಪಾತ್ರಚಿತ್ರಣ ಎಲ್ಲವೂ ಪೂರ್ವನಿಶ್ಚಿತ ಸಿದ್ಧಮಾದರಿ. ಕೌಶಲ್ಯವಿರುವ ನಿರೂಪಣೆಯಲ್ಲಿ ಮಾತ್ರ. ಆದುದರಿಂದ ಒಟ್ಟಿನಲ್ಲಿ ಸಾಂಪ್ರದಾಯಿಕ ಕಥನವು ತಾನು ಹೊಮ್ಮಿಸುವ ಪ್ರಬಂಧ ಧ್ವನಿಗೆ ಸಂಬಂಧಿಸಿದಂತೆ ಮಾತ್ರ ಕ್ರಿಯೆ ಮತ್ತು ಘಟನೆಗಳ ತರ್ಕವನ್ನು ಕಾಪಾಡಿಕೊಳ್ಳುತ್ತದೆ. ಆದರೆ ನಾವೆಲ್‌ನಲ್ಲಿ ಕ್ರಿಯೆ, ಘಟನೆ, ಪಾತ್ರ ಈ ಎಲ್ಲದರ ಬೆಳವಣಿಗೆಗಳಲ್ಲಿಯೂ ನಿಶ್ಚಿತ ತರ್ಕಬದ್ಧತೆ ಇರಬೇಕು. ಅವು ಓದುಗರ ಸಹಜವಾಗಿ ನಂಬುವಂತಿರಬೇಕು. ಯಾವುದೇ ಕ್ರಿಯೆಗಳ ಕಾರಣಗಳ ಓದುಗರಿಗೆ ಸ್ಪಷ್ಟವಾಗಿ ಅರಿವಿಗೆ ಬರುವಂತೆ ಇರಬೇಕು. ಫಾಸ್ಟರ್ ಇದನ್ನೇ 'ವಿಸಬಲ್ ವರ್ಲ್ಡ್' ಎಂದು ಕರೆದುದು. ಈ ಎಲ್ಲವೂ ಸೇರಿ ಕಥಾಸಂವಿಧಾನವಾಗುತ್ತದೆ.

ಕಥಾಸಂವಿಧಾನದಲ್ಲಿ ಲೇಖಕನು ನಾವೆಲ್‌ನ ಕ್ರಿಯೆಗಳನ್ನು ಸಕಾರಣವಾಗಿ ನಿರ್ದಿಷ್ಟ ವ್ಯವಸ್ಥೆಗೆ ಒಳಪಡಿಸುತ್ತಾನೆ ಅಂದಾಗ, ಅವನ 'ಕಾಲ'ವನ್ನು ವ್ಯವಸ್ಥೆ ಗೊಳಿಸಿರುತ್ತಾನೆ ಎಂದೇ ಅರ್ಥ. ಸಾಂಪ್ರದಾಯಿಕ ಗದ್ಯಕಥನಗಳಿಂದ ಕಾದಂಬರಿಯೂ ವಿಶಿಷ್ಟವೆನಿಸುವ ಇನ್ನೊಂದು ಪ್ರಮುಖ ಅಂಶ ಈ ವ್ಯವಸ್ಥಿತಗೊಂಡಿರುವ ಕಾಲದ ಆಯಾಮ.

ಸಾಂಪ್ರದಾಯಿಕ ಗದ್ಯದ ಕಾಲದ ಪರಿಕಲ್ಪನೆಯು ಅನಿರ್ದಿಷ್ಟ, ಅಸ್ಪಷ್ಟ ಮತ್ತು ಅನಂತವಾಗಿರುತ್ತದೆ. ಆದರೆ ನಾವೆಲ್‌ನಲ್ಲಿ ಕಾಲ ಮತ್ತು ಅವಕಾಶ ಈ ಎರಡು ನಿರ್ದಿಷ್ಟತೆಯನ್ನು ಪಡೆದಿರುತ್ತವೆ. ಈ ನಿರ್ದಿಷ್ಟತೆಯು ಪಾತ್ರ, ಘಟನೆ, ಕ್ರಿಯೆಗಳಲ್ಲಿ ವ್ಯಕ್ತವಾಗುತ್ತಿರುತ್ತದೆ.

ಕನ್ನಡದ ಕಥನ ಕಲೆಯು ಪಾಶ್ಚಿಮಾತ್ಯ ಕಥನಕ್ರಮಗಳಿಂದ ಪ್ರಭಾವಿತವಾಗಿದೆ. ವಸಾಹತುಶಾಹಿ ಆಳ್ವಿಕೆ, ಆಧುನಿಕತೆಯ ಜೊತೆಜೊತೆಗೆ ಬಂದ ಅಂದರೆ- ಆಧುನಿಕತೆ ಯಾವುದು ಪಾಶ್ಚಾತ್ಯ ಸಂಸ್ಕೃತಿ ಯಾವುದು ಎಮದು ವಿಭಜಿಸಲಾಗದಂತಹ ಜೀವನ ವಿಧಾನವೊಂದರ ಪ್ರಭಾವದಿಂದಲೂ ಇಲ್ಲಿನ ಕಥನ ಕಲೆಯು ತನ್ನ ನೆಲೆಗಳನ್ನು ಕಂಡುಕೊಂಡಿತೆಂದರೆ ತಪ್ಪಾಗಲಾರದು. "ವಸಾಹತು ಆಡಳಿತ ಮತ್ತು ವಸಾಹತು ಆಧುನಿಕ ಭಾರತೀಯ ಸಮಾಜವನ್ನು ಹೊಸ ರೀತಿಯಲ್ಲಿ ರೂಪಿಸಲಾರಂಭಿಸಿತು. ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿ ಹೊಸ ಚಲನೆಗಲು ಆರಂಭವಾದವು. ರಾಜಕಾರಣ, ಆಡಳಿತ, ಸಂಸ್ಥೆತಿಗಳಲ್ಲಿ ನಡೆದ ರಚನೀಕರಣ ಮತ್ತು ರಚನಾನಿರಸನ ಮತ್ತು ಪುನರಚನೀಕರಣ ಪ್ರಕ್ರಿಯೆಯನ್ನು ಹಾಗೂ ನಮ್ಮ ಆಧುನಿಕತೆಯ ಸ್ವರೂಪವನ್ನು ವಿಶ್ಲೇಷಿಸುತ್ತಲೇ ಮೊದಲ ಕಾದಂಬರಿಗಳನ್ನು ನಾವು ವಿವರಿಸಿಕೊಳ್ಳಬೇಕು ಎನ್ನುವ ಹೇಳಿಕೆಯಲ್ಲಿಯೂ ಈ ಮಾತು ಸ್ಪಷ್ಟವಾಗುತ್ತದೆ." ಹಾಗೆಯೇ ಮುಂದುವರಿದು ಕರ್ನಾಟಕದ ವಸಾಹತು ಚರಿತ್ರೆ ಟಿಪ್ಪು ಪತನಗೊಂಡ 1799 ರಿಂದ ಆರಂಭವಾಗು ವುದಾದರೂ 1857ರ ಭಾರತದ ಸ್ವಾತಂತ್ರ್ಯ ಸಂಗ್ರಾಮವನ್ನು ದಮನ ಮಾಡುವ ಹೊತ್ತಿಗೇ ವಸಾಹತು ಆಡಳಿತ ಭಾರತದಲ್ಲಿ ಭದ್ರವಾಗಿ ಕಾಲೂರಿತ್ತು. ಅದೇ ವರ್ಷ ಭಾರತದ ಮೂರು ಪ್ರಮುಖ ಪಟ್ಟಣಗಳಾದ ಕಲ್ಕತ್ತಾ, ಮುಂಬೈ ಮತ್ತು ಮದರಾಸು ಗಳಲ್ಲಿ ಪಾಶ್ಚಿಮಾತ್ಯ ಕ್ರಮದ ಶಿಕ್ಷಣವನ್ನು ನೀಡುವ ವಿಶ್ವವಿದ್ಯಾಲಯಗಳ ಸ್ಥಾಪನೆ ಯಾದುದು ಗಮನಾರ್ಹ. ಈ ಶಿಕ್ಷಣ ಕ್ರಮದ ಹಿಂದಿನ ಉದ್ದೇಶ, ಅದರ ಪರಿಣಾಮ, ಕುಪ್ರಸಿದ್ಧವಾದ ಮೆಕಾಲೆಯ ಮಿನಿಟ್ಸ್ ಮೊದಲಾದವುಗಳು ಈಗಾಗಲೇ ಎಲ್ಲರಿಗೂ ತಿಳಿದಿರುವ ಸಂಗತಿ. ವಸಾಹತುಶಾಹಿಯು ಭಾರತದಲ್ಲಿ ಸಾಮಾಜಿಕ ಕ್ರಾಂತಿಯನ್ನೇನೂ ತರಲಿಲ್ಲ. ಬದಲಾಗಿ ಕೆಲವು ಪರಿವರ್ತನೆಗಳನ್ನು ಮತ್ತು ವಕ್ರ ಬದಲಾವಣೆಗಳನ್ನು ತಂದಿತು. ಹಳೆಯ ಫ್ಯೂಡಲ್ ವ್ಯವಸ್ಥೆಯನ್ನು ಎದುರಿಸಿ ಛಿದ್ರಮಾಡಿ ಹುಟ್ಟಿದ ಆಧುನಿಕತೆಯಲ್ಲ ಅದು. ಭಾರತದ ಶ್ರೇಣೀಕರಣಗಳನ್ನು ಮುಂದುವರೆಸಿದ ಮತ್ತು ಪರಿವರ್ತಿಸಿದ ಆಧುನಿಕತೆಯದು. ಭಾರತೀಯ ಇಂಗ್ಲಿಷ್ ವಿದ್ಯಾವಂತ ಮನಸ್ಸು ರೂಪಗೊಂಡದ್ದು ಈ ಅವಸ್ಥಾಂತರಗಳಲ್ಲಿ. ಕರ್ನಾಟಕದ ವಸಾಹತುಶಾಹಿ ಚರಿತ್ರೆಯನ್ನು ಗುರುತಿಸುವುದು ಟಿಪ್ಪುವಿನ ಪತನದ ನಂತರದ ಕಾಲಘಟ್ಟದಿಂದಾಗಿ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಸಮಯಕ್ಕೆ ದೇಶಾದ್ಯಂತ ಬ್ರಿಟಿಷ್ ಸಾಮ್ರಾಜ್ಯಶಾಹಿ ಆಡಳಿತ ದೇಶವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತ್ತು. "ವಸಾಹತುಶಾಹಿಯು ಭಾರತದಲ್ಲಿ ಸಾಮಾಜಿಕ ಕ್ರಾಂತಿಯನ್ನೇನು ತರಲಿಲ್ಲ. ಬದಲಾಗಿ ಕೆಲವು ಪರಿವರ್ತನೆಗಳನ್ನು ಮತ್ತು ವಕ್ರ ಬದಲಾವಣೆಗಳನ್ನು ತಂದಿತು. ಹಳೆಯ ಫ್ಯೂಡಲ್ ವ್ಯವಸ್ಥೆಯನ್ನು ಎದುರಿಸಿ, ಛಿದ್ರಮಾಡಿ ಹುಟ್ಟಿದ ಆಧುನಿಕತೆಯಲ್ಲ ಅದು. ಭಾರತದ ಶ್ರೇಣೀಕರಣಗಳನ್ನು ಮುಂದುರಿಸಿದ ಮತ್ತು ಪರಿವರ್ತಿಸಿದ ಆಧುನಿಕತೆಯದು. ಭಾರತೀಯ ಇಂಗ್ಲಿಷ್ ವಿದ್ಯಾವಂತ ಮನಸ್ಸು ರೂಪಗೊಂಡದ್ದು ಈ ಅವಸ್ಥಾಂತರಗಳಲ್ಲಿ ಎಂದು ಹೇಳಲಾಗುತ್ತದೆ." ಪ್ರಾದೇಶಿಕ ಸತ್ವವುಳ್ಳ ಕನ್ನಡದ ಪ್ರಥಮ ಸಾಮಾಜಿಕ ಕಾದಂಬರಿ ಎಂಬ ಹೆಗ್ಗಳಿಕೆಗೆ ಪಾತ್ರವಾದ ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' ಕಾದಂಬರಿಯ ಸ್ವರೂಪವನ್ನು ಇಲ್ಲಿ ಗಮನಿಸಬಹುದಾಗಿದೆ. 1899ರಲ್ಲಿ ಪ್ರಕಟಗೊಂಡ 'ಇಂದಿರಾಬಾಯಿ' ಕಾದಂಬರಿಯು ಸಾಮಾಜಿಕ ಅನಿಷ್ಟಗಳನ್ನು ವಿರೋಧಿಸುವ ಕಥಾಸಂವಿಧಾನವನ್ನು ಹೊಂದಿದ ಕೃತಿಯಾಗಿದೆ. ಕಾದಂಬರಿಯ ಶೈಲಿಯು ಪ್ರಾದೇಶಿಕ ಭಾಷೆಯ ಸೊಗಡನ್ನು ಒಳಗೊಂಡು ಹಗುರವಾದ ಹಾಸ್ಯದಿಂದ ನಿರೂಪಿಸಲ್ಪಟ್ಟ ಕಥಾನಕವಾಗಿದೆ.

‘‘ವಸಾಹತೀಕರಣದ ಸಂದರ್ಭದಲ್ಲಿ ಪರಕೀಯ ಯಜಮಾನ ಸಂಸ್ಕೃತಿ ಮತ್ತು ದೇಸೀ ಸಂಸ್ಕೃತಿಗಳ ಸಂಘರ್ಷದಲ್ಲಿ ಹುಟ್ಟಿಕೊಂಡ ಇಂದಿರಾಬಾಯಿ ಯಜಮಾನ ಸಂಸ್ಕೃತಿ ನೆಲದ ಸಂಸ್ಕೃತಿಯನ್ನು ತೊತ್ತಳ ತುಳಿದು ನಿಂತಾಗ ಮತ್ತೆ ಪ್ರತಿಭಟನೆಯ ರೂಪದಲ್ಲಿ ದೇಶೀಯ ಸಂಸ್ಕೃತಿ ಮತ್ತೆ ನೆಲೆಯಾಗಲು ಪ್ರಯತ್ನಿಸುತ್ತದೆ. ಹೀಗಾಗಿ ಇಂದಿರಾಬಾಯಯಲ್ಲಿ ವೆಂಕಟರಾಯರು ದೇಸೀಯ ಸಂಸ್ಕೃತಿಯ ದಟ್ಟವಾದ ವಿವರಗಳನ್ನು ನೀಡುತ್ತಾರೆ. ಮದುವೆ, ಊರಜಾತ್ರೆ, ಯಕ್ಷಗಾನ, ಕಥಾಪ್ರಸಂಗ, ಮದುವೆ, ನಾಮಕರಣ, ಜಾತಕ ನೋಡುವಲ್ಲಿಂದ ಚತುರ್ದಿ, ನಾಗೋಲೆಯ ವಿವರ, ಕಾಶೀಯಾತ್ರೆ ಉದ್ದಿನ ಮುಹೂರ್ತ ಮುತ್ತೈದೆಯರು ಹಾಡಿದ ಶೋಭನ ಗೀತ ಮುಂತಾದ ಜಾನಪದ ಆಚರಣೆಗಳು ಕಾದಂಬರಿಯಲ್ಲಿ ಹಾಸುಹೊಕ್ಕಾಗಿವೆ.’’ ಇಂದಿರಾಬಾಯಿಯಲ್ಲಿ ಬಳಕೆಯಾಗಿರುವ ಭಾಷೆ ಅಂದಿನ ಸಾಮಾಜಿಕ ಸಂದರ್ಭದ ಆಸಕ್ತಿಕರ ಅಂಶಗಳನ್ನು ಸಂವಹನಗೊಳಿಸುವಲ್ಲಿ ಯಶಸ್ವಿಯಾಗಿದೆ. ಕಾದಂಬರಿಯ ವಸ್ತು ಮತ್ತ ತಂತ್ರದ ದೃಷ್ಟಿಯಿಂದ ಭಾಷೆಯನ್ನು ಗುಲ್ವಾಡಿಯವರು ಸಮರ್ಥವಾಗಿ ದುಡಿಸಿಕೊಂಡಿದ್ದಾರೆಂದು ಹೇಳಬಹುದು. ನಿರೂಪಣೆಯ ಭಾಷೆಗೂ ಮತ್ತು ಪಾತ್ರಗಳ ಸಂಭಾಷಣೆಯ ಭಾಷೆಗೆ ವ್ಯತ್ಯಾಸವಿದೆ. ಇದು ಸಾಮಾಜಿಕ ಏಣಿ ಶ್ರೇಣಿಗಳನ್ನು ಸೂಚಿಸುವುದಾಗಿದೆ. ಆ ಮೂಲಕ ಕಾದಂಬರಿಗೆ ಪ್ರಾದೇಶಿಕ ಚೌಕಟ್ಟನ್ನು ದೊರಕಿಸಿಕೊಡುವ ತಂತ್ರಗಾರಿಕೆಯೂ ಆಗಿದೆಯೆಂದರೆ ತಪ್ಪಿಲ್ಲ. ಕನ್ನಡದ ಪ್ರಥಮ ಸಾಮಾಜಿಕ ಕಾದಂಬರಿಯೆಂಬ ಹಿರಿಮೆಗೆ ಪಾತ್ರವಾದ ‘ಇಂದಿರಾಬಾಯಿ’ ಕೃತಿಯೂ ದೇಸೀ ನೆಲೆಯ ಜೀವನವಿಧಾನವನ್ನು ತನ್ನ ಕಥಾ ಸಂವಿಧಾನದಲ್ಲಿ ಹಾಸುಹೊಕ್ಕಾಗಿಕೊಂಡಿದೆ. ಇಲ್ಲಿ ವಿಡಂಬನೆಯೂ ಇದೆ. ಪ್ರಾದೇಶಿಕ ವಿವರಗಳೊಂದಿಗೆ ಸಮಕಾಲೀನ ಸಾಮಾಜಿಕ ಸಂದರ್ಭಗಳ ಚಿತ್ರಣವಿದೆ. ತಾವು ನಂಬಿಕೊಂಡಿರುವ ಮತ್ತು ಭಾವಿಸುತ್ತಿರುವ ಭಾರತೀಯ ಮೌಲ್ಯಗಳ ಮತ್ತು ಪಾಶ್ಚಾತ್ಯ ಸಂಸ್ಕೃತಿಯ ನಡುವಿನ ಸೂಕ್ಷ್ಮ ತಿಕ್ಕಾಟವೂ ಇಲ್ಲಿದೆ.

ಕನ್ನಡದಲ್ಲಿ ಸಣ್ಣಕಥೆಗಳು ಪ್ರಕಾರವು ನವೋದಯ ಕಾಲಘಟ್ಟದಲ್ಲಿ ರೂಪುಪಡೆದ ಸಾಹಿತ್ಯಿಕ ಪ್ರಕಾರವಾಗಿದೆ. ನಂತರ ಪ್ರಗತಿಶೀಲ, ನವ್ಯೋತ್ತರ, ಬಂಡಾಯದ ಕಾಲಘಟ್ಟ ಗಳಲ್ಲಿ ಈ ಪ್ರಕಾರವು ಸಮೃದ್ಧವಾಗಿ ರೂಪಗೊಂಡಿತು. 1900 ರಲ್ಲಿ ‘ಸುವಾಸಿನಿ’ ಎಂಬ ಪತ್ರಿಕೆಯಲ್ಲಿ ಪ್ರಕಟವಾದ ದಿ.ಪಂಜೆಮಂಗೇಶರಾಯರ ನನ್ನ ಚಿಕ್ಕತಾಯಿ, ಭಾರತ ಶ್ರವಣ, ಕಮಲಪುರದ ಹೋಟೆಲ್ನಲ್ಲಿ ಮೊದಲಾದ ಕಥೆಗಳೇ ಕನ್ನಡ ಸಣ್ಣಕಥೆಯ ಮೊದಲ ಉದಾಹರಣೆಗಳನ್ನಬಹುದು. ಈ ಕಥೆಗಳಲ್ಲಿ ಆಧುನಿಕ ಸಣ್ಣಕಥೆಯ ಸ್ವರೂಪ ಇನ್ನೂ ಖಚಿತವಾಗಿ ಒಡಮೂಡಿಲ್ಲ. ಕೆಲವು ಹಾಸ್ಯಪೂರ್ಣ ಪ್ರಸಂಗಗಳನ್ನು ಇವುಗಳಲ್ಲಿ ನಿರೂಪಿಸಲಾಗಿದೆ. ಕೆಲವುಸಲ ಲಲಿತಪ್ರಬಂಧದ ಕಡೆ, ಕೆಲವುಸಲ ವ್ಯಕ್ತಿಚಿತ್ರದ ಕಡೆ ಇವು ವಾಲುತ್ತವೆ. ಆದರೆ ಪ್ರಾಸಂಗಿಕ ವಾಸ್ತವತಾವಾದದ ಪ್ರಾದೇಶಿಕ ವಾತಾವರಣವನ್ನು ನಿರ್ಮಿಸುವಲ್ಲಿ ಯಶಸ್ವಿಯಾಗಿವೆ ಎನ್ನುವ ಅಭಿಪ್ರಾಯ ವ್ಯಕ್ತವಾಗಿದೆ.

ಕೆರೂರು ವಾಸುದೇವಾಚಾರ್ಯರು ಬರೆದಿರುವ ಸಣ್ಣಕಥೆಗಳೇ ಆಧುನಿಕ ಸಣ್ಣಕಥೆಗಳಿಗೆ ಹತ್ತಿರವಾಗಿವೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಇವರು ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಪತ್ತೇದಾರಿ ಮೊದಲಾಗಿ ವೈವಿಧ್ಯಮಯ ಕಥೆಗಳನ್ನು ಬರೆದಿದ್ದಾರೆ. ಇವುಗಳಲ್ಲಿ ಸಾಮಾಜಿಕ ಕಥೆಗಳು ಆಧುನಿಕ ಸಣ್ಣಕಥೆಯ ಸ್ವರೂಪಕ್ಕೆ ಹೆಚ್ಚು ಸಮೀಪವಾಗಿವೆ ಮತ್ತು ಇವುಗಳಲ್ಲಿಯೇ ಕೆರೂರರ ಸ್ವತಂತ್ರ ಪ್ರತಿಭೆ ಹೊಡೆದು ಕಾಣುತ್ತದೆ. ಆದರೂ ತಾಂತ್ರಿಕವಾಗಿ ಈ ಕಥೆಗಳು ಆಧುನಿಕ ಸಣ್ಣಕಥೆಗಳಿಗಿಂತ ಭಿನ್ನವಾಗಿವೆ. ಇವುಗಳಿಗೆ ಸಣ್ಣಕಥೆಗಳ ಆಕರ್ಷಕ ಆರಂಭವಾಗಲಿ, ಅನಿರೀಕ್ಷಿತ ಮುಕ್ತಾಯಗಳಾಗಲಿ ಇಲ್ಲ. ಒಂದು ಕಥೆಯ ತಾರ್ಕಿಕ ಆರಂಭ, ಮಧ್ಯ, ಮುಕ್ತಾಯ ಗಳನ್ನು ಕಾಲಾನುಕ್ರಮದಲ್ಲಿ ನಿರೂಪಿಸುವುದು ಈ ಕಥೆಗಳ ಲಕ್ಷಣ. ಈ ಕಥೆಗಳ ತಂತ್ರವನ್ನು ಕೆರೂರು ಮರಾಠಿ ‘ಸಂಪೂರ್ಣ ಕಥೆ’ಗಳಿಂದ ಕಲಿತರೆಂದು ತಿಳಿದು ಬರುತ್ತದೆ. ವಸಾಹತುಶಾಹಿ ಕಾಲಘಟ್ಟದಿಂದ ಮತ್ತು ಅದರಾಚೆ ಸ್ವಾತಂತ್ರ್ಯ ನಂತರದ ಆರಂಭಿಕ ಕಾಲದಲ್ಲಿ ರೂಪಗೊಂಡ ಸಣ್ಣಕಥೆಗಳೆಲ್ಲೆಲ್ಲ ಪ್ರಾದೇಶಿಕತೆಯ ಅಂಶವೇ ಢಾಳಾಗಿ ಕಂಡುಬರುತ್ತದೆ ಎಂದರೂ ತಪ್ಪಾಗಲಾರದು. ಒಂದು ರೀತಿಯಲ್ಲಿ ರಾಷ್ಟ್ರೀಯತೆಯ ಗುಂಗಿನಿಂದ ಹೊರಬರದ ಸಮಕಾಲೀನ ಎಲ್ಲಾ ಬರಹಗಾರರು ಸಾಂಪ್ರದಾಯಿಕ ಚೌಕಟ್ಟಿನಲ್ಲಿದ್ದುಕೊಂಡೇ ಪಾಶ್ಚಾತ್ಯ ಬದುಕಿನ ಜೀವನ ವಿಧಾನ, ನಂಬಿಕೆಗಳ ಪ್ರಭಾವ ಮತ್ತು ಆಧುನಿಕತೆಯ ಪ್ರಭಾವದಿಂದ ಸುಧಾರಣಾವಾದಿ ನಿಲುವು ತಳೆದುದು ಅವರ ಸೃಷ್ಟಿಶೀಲತೆಯ ಮೇಲೆ ಪ್ರಭಾವ ಬೀರಿತೆನ್ನಬಹುದು. ಹಾಗಾಗಿ ಇಲ್ಲಿ ಬಂದ ಕಥಾನಕಗಳಲ್ಲಿ ತನ್ನತನದ ಅಂದರೆ ದೇಶೀ ನೆಲೆಯ ಹಿರಿಮೆಯನ್ನು ಪ್ರಕಟಪಡಿಸುವ ಉತ್ಸಾಹ ಮತ್ತು ತುರ್ತು ಇದ್ದುದರಿಂದ ಆರಂಭದಲ್ಲಿ ಬಂದ ಕಥಾನಕಗಳೆಲ್ಲವೂ ಒಂದರ್ಥದಲ್ಲಿ ಪ್ರಾದೇಶಿಕವಾದುವುಗಳೆನ್ನಬಹುದು. ಕೆರೂರು ವಾಸುದೇವಚಾರ್ಯರ ಮಲ್ಲೇಶಿಯ ನಲ್ಲೆಯರು ಒಂದು ಅರ್ಥಪೂರ್ಣವಾದ ಕಥೆಯಾಗಿದೆಯೆಂದು ವಿಮರ್ಶಕರು ಗುರುತಿಸುತ್ತಾರೆ. ಇದು ಯುವಕನೊಬ್ಬನ ಲೈಂಗಿಕ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಹೆಣೆದ ಕಥೆಯಾಗಿದೆ. ಈ ಕಥೆಯ ಕುರಿತು ಗಿರಡ್ಡಿ ಗೋವಿಂದರಾಜು ಅವರು ಈ ರೀತಿ ವಿವರಿಸುತ್ತಾರೆ. ‘‘ಈ ಕತೆಯ ಇನ್ನೊಂದು ವೈಶಿಷ್ಟ್ಯವೇನೆಂದರೆ, ಒಂದು ಕಾಲದ ಜೀವನಕ್ರಮವನ್ನು ಸಹಜವಾದ ವಿವರಗಳ ಮೂಲಕ ಮತ್ತು ಭಾಷೆಯ ಎಚ್ಚರದ ಬಳಕೆಯ ಮೂಲಕ ಹಿಡಿದಿಟ್ಟಿರುವುದು. ಇಲ್ಲಿ ಬರುವ ದಣಿ ಮತ್ತು ಆಳಿನ ನಡುವಿನ ಸಂಬಂಧ ಗತಿಸಿಹೋದ ಕಾಲಕ್ಕೆ ಸೇರಿದ್ದು. ಇದು ಇನ್ನೂ ಶೋಷಣೆ ಎಂಬ ಕಲ್ಪನೆ ಸಾಹಿತ್ಯ ಮತ್ತು ಬದುಕಿನಲ್ಲಿ ಸ್ಪಷ್ಟವಾಗುವುದಕ್ಕಿಂತ ಮುಂಚಿನದು. ಮಲ್ಲೇಶಿ ದಣಿಗಳ ನಂಬಿಗಸ್ತ ಆಳು. ದಣಿಗಳು ಅವನ ಬಗ್ಗೆ ವಿಶ್ವಾಸ, ಒಂದು ಸಾವಯವ ಸಮಾಜದಲ್ಲಿ ಮಾತ್ರ ಸಾಧ್ಯವಾಗುವಂತಹದ್ದು. ಒಂದು ವ್ಯವಸ್ಥೆಯ ನಿಟ್ಟಿನಲ್ಲಿ ಎಷ್ಟೇ ಕೆಟ್ಟದ್ದಾಗಿದ್ದರೂ ವ್ಯಕ್ತಿಗಳು ಒಳ್ಳೆಯವರಾಗಿದ್ದರೆ ಮಾನವೀಯ ಸಂಬಂಧಗಳು ಆ ವ್ಯವಸ್ಥೆಯ ಒಳಗೂ ಹಾರ್ದಿಕವಾಗಿ ಬೆಳೆಯಬಲ್ಲ ಸಾಧ್ಯತೆಯನ್ನು ಕತೆ ಸೂಚಿಸುತ್ತದೆ’’ ಎನ್ನುತ್ತಾರೆ.

ಕನ್ನಡದಲ್ಲಿ ಮೊದಲನೆಯ ಕಥಾಸಂಕಲವಾಗಿ ಮಾಸ್ತಿಯವರ ‘ಕೆಲವು ಸಣ್ಣಕತೆಗಳು’ ಎಂಬ ಸಂಕಲವನ್ನು ಹೆಸರಿಸಲಾಗುತ್ತದೆ. ಮಾಸ್ತಿಯವರ ಈ ಸಂಕಲನದಿಂದಾಗಿ ಕನ್ನಡದಲ್ಲಿ ಸಣ್ಣಕಥೆಯ ಪ್ರಕಾರವು ಒಂದು ಸ್ಪಷ್ಟರೂಪ ಪಡೆಯಿತೆಂದು ಹೇಳಬಹುದು. ಮಾಸ್ತಿಯವರ ಸಣ್ಣಕತೆಗಳಲ್ಲಿ ಪ್ರಾದೇಶಿಕತೆಯ ಸ್ವರೂಪವನ್ನು ನಾವು ಕಾಣಬಹುದಾಗಿದೆ ಅವರ ‘ವೆಂಕಟಿಗನ ಹೆಂಡತಿ’ ಮತ್ತು ‘ಜ್ಯೋಗೇರ

ಅಂಜಪ್ಪನ ಕೋಳಿ ಕಥೆ'ಗಳನ್ನು ಇದಕ್ಕೆ ನಿದರ್ಶನವಾಗಿ ನೀಡಬಹುದು. ದೇವನೂರು ಮಹದೇವ ಅವರ ಸಣ್ಣಕತೆಗಳು 'ನಂಜನಗೂಡು ಪರಿಸರದ ಉಪಭಾಷೆ'ಯೊಂದರಲ್ಲಿ ರಚಿತವಾದ ಕತೆಗಳಾಗಿವೆ. ದಲಿತ ಲೋಕದ ಅನುಭವಗಳನ್ನು ಕಲಾತ್ಮಕವಾಗಿ ಹಿಡಿದಿಡುವ ಇವರ ಕತೆಗಳು ಸ್ವರೂಪದಲ್ಲಿ ಆಡುನುಡಿಯೊಂದರ ಮೂಲಕ ರಚನೆಗೊಂಡವುಗಳಾಗಿವೆ. ಇಂತಹ ಆಡುನುಡಿಯನ್ನು ಕಥನಕ್ರಮದ ಎಲ್ಲಾ ಹಂತಗಳಲ್ಲೂ ಪ್ರಾಯೋಗಿಕವಾಗಿ ಬಳಸಿ ಯಶಸ್ಸುಕಂಡವರು ಅವರು. ಇವರ ನಂತರ ಇವರನ್ನೇ ಅನುಸರಿಸ ಹೊರಟವರಿಗೆ ಇವರ ಕಲೆಗಾರಿಕೆ ಸಿದ್ಧಿಸಲಾಗದೆ ಕೇವಲ ಪ್ರಾದೇಶಿಕ ವಿವರಗಳಲ್ಲಿ ಕಸರತ್ತು ಮಾಡಿದ್ದು ಮಾತ್ರ ಕುತೂಹಲಕಾರಿಯಾಗಿದೆ. ಮೂಲಭೂತವಾಗಿ ಒಂದು ಉತ್ತಮ ಕಥನಕ್ಕಿರುವ ವಸ್ತು, ತಂತ್ರ, ನಿರೂಪಣೆ ಇವೆಲ್ಲವನ್ನೂ ಒಳಗೊಂಡಂತೆ ಪೂರಕವಾಗಿ ಅದನ್ನು ಕಲಾಕೃತಿಯನ್ನಾಗಿಸುವ ಪ್ರತಿಭೆ ಮುಖ್ಯವಾಗಿರುತ್ತದೆ.

ಕನ್ನಡ ಮೊದಲ ಕಾದಂಬರಿಯಷ್ಟೇ ಅಲ್ಲದೆ ಮೊದಲ ಪ್ರಾದೇಶಿಕ ಕಾದಂಬರಿ ಎಂಬುದಾಗಿ ಇಂದಿರಾಬಾಯಿಯನ್ನು ಹೆಸರಿಸಲಾಗುತ್ತದೆ. ಶ್ರೀ ಗುಲ್ವಾಡಿ ವೆಂಕಟರಾಯರು 1899 ರಲ್ಲಿ ರಚಿಸಿದ ಈ ಕೃತಿ ಅಂದಿನ ಸಾಮಾಜಿಕ ಸಂದರ್ಭ, ಸಮಕಾಲೀನ ಸಂಘರ್ಷಗಳನ್ನು ದಾಖಲಿಸಲು ಪ್ರಯತ್ನಿಸಿದ್ದಾರೆ. ಈ ಕಾದಂಬರಿಯ ಸಾರಾಂಶ ಹೀಗಿದೆ: "ಕಮಲಪುರದ ಎಂಬ ನಗರದಲ್ಲಿ ನರಸಿಂಹಶಾಸ್ತ್ರಿ ಎಂಬ ವರ್ತಕನ ಕಾರ್ಖಾನೆಯಲ್ಲಿ ಶಾನುಭೋಗನಾಗಿರುವ ಹಂಪೆ ಭೀಮರಾಯ ಒಬ್ಬ ಸಭ್ಯ ಗೃಹಸ್ಥ. ಅವನ ಹೆಂಡತಿ ಅಂಬಾಬಾಯಿ. ಅದೇ ಊರಲ್ಲಿ ಸೂದರ ರಾಯನೆಂಬ ಇನ್ನೊಬ್ಬ ಗೃಹಸ್ಥ ಅಗ್ರಹಾರದಲ್ಲಿ ವಾಸವಾಗಿದ್ದನು. ಅವನ ಹೆಂಡತಿ ಸುಶೀಲೆ. ಅವರ ಮಗನೇ ಭಾಸ್ಕರ. ಸುಂದರ ರಾಯನ ಹಬ್ಬಿಸಿದ ಸುದ್ದಿಯಿಂದ ಕ್ರುದ್ಧಳಾದ ಅಂಬಾಬಾಯಿ ಆತನನ್ನು ಕೊಲ್ಲುವಂತೆ ಗಂಡನನ್ನು ಪ್ರಚೋದಿಸುತ್ತಾಳೆ. ನರಸಿಂಹ ಶಾಸ್ತ್ರಿಗೂ ಅಂಬಾಬಾಯಿಗೂ ಅನೈತಿಕ ಸಂಬಂಧವಿದೆ ಎಂಬ ಗುಲ್ಲು ಹುಟ್ಟಿಸಿದವನು ಸುಂದರರಾಯ ಎಂಬುದು ಅಂಬಾಬಾಯಿಯ ತಿಳುವಳಿಕೆ. ಕೊನೆಗೆ ಭೀಮರಾಯ ವಿಷಹಾಕಿಸಿ ಸುಂದರರಾಯನನ್ನು ಕೊಲ್ಲಿಸುತ್ತಾನೆ. ಪೋಲೀಸರಿಗೆ ಲಂಚನೀಡಿ ಆತ ಕೊಲೆಯ ಆಪಾದಾನೆಯಿಂದ ಪಾರಾಗುತ್ತಾನೆ. ಭೀಮರಾಯನ ಗುರುಗಳು ಜಾತಿಯವರ ಸಭೆಗೆ ಧರ್ಮ ವಿಚಾರಕನಾಗಿ ನೇಮಕಗೊಳ್ಳುತ್ತಾನೆ. ಭೀಮರಾಯನ ಮಗಳೇ ಇಂದಿರಾಬಾಯಿ. ಅವಳ ಗಂಡ ವಿಠ್ಠಲರಾಯ ವಿಷಯ ಲಂಪಟನಾಗಿ ಸೂಳೆಯರ ಸಂಘಮಾಡಿ ಕೊನೆಗೊಂದು ದಿನ ಸಾಯುತ್ತಾನೆ. ಆಗ ಇಂದಿರೆಗೆ ಹನ್ನೊಂದು ಕಳೆದು ಹನ್ನೆರಡುವರ್ಷ ವಯಸ್ಸು. ಆದರೆ ವಿಧವೆಯಾಗುವ ಪೂರ್ವದಲ್ಲಿ ಅವಳನ್ನು ಕುಮಾರಿಯಾಗಿಯೇ ಉಳಿದಿದ್ದಾಳೆ. ವಯಸ್ಸಿಗೆ ಮೊದಲೇ ಶೋಭನ ಪ್ರಸ್ಥ ಮಾಡಿದರೆ ಅದು ಕಾನೂನುಬಾಹಿರ ಸಂಗತಿಯಾಗಿತ್ತು. ನಂತರದ ಕತೆಯಲ್ಲಿ ಇಂದಿರಾಬಾಯಿಯ ವೈಧವ್ಯದ ಚಿತ್ರಣ ಬರುತ್ತದೆ. ಸಮಾಜ ಅವಳನ್ನು ನೋಡುವ ಪರಿಯನ್ನು ವರ್ಣಿಸಲಾಗಿದೆ. ತಂದೆ ಭೀಮರಾಯ ಮಗಳ ಪರವಹಿಸುತ್ತಾನೆ. ಕಾದಂಬರಿಯಲ್ಲಿ ಹರೆಯದ ವಿಧವೆಯನ್ನು ತಮ್ಮ ಕಾಮಲೋಲುಪತೆಗೆ ಬಳಸಿಕೊಳ್ಳುವ ವಿವರಗಳು ಬರುತ್ತವೆ. ಇದೆಲ್ಲದರಿಂದ ಪಾರಾಗಿ ಇಂದಿರಾಬಾಯಿ ಮುಂಬೈಗೆ ಹೋಗಿ ಮೆಟ್ರಿಕ್ಯೂಲೇಶನ್ ಮುಗಿಸಿ ವಿದೇಶದಿಂದ ಅಭ್ಯಾಸ ಮುಗಿಸಿ ಬಂದ ಭಾಸ್ಕರರಾಯನನ್ನು ಮದುವೆಯಾಗುತ್ತಾಳೆ. ಇದಕ್ಕೆ ಸಾಂಪ್ರದಾಯಿಕ ಸಮಾಜದಿಂದ ಪ್ರತಿರೋಧ ಎದುರಾದರೂ ಅವ್ಯಾವೂ ಅಂತಹ ಪರಿಣಾಮಗಳನ್ನು ಬೀರುವುದಿಲ್ಲ. ಇದು ಕಾದಂಬರಿಯ ಕಥಾಹಂದರವಾಗಿದೆ. ಮನೆಯ ಮಾತು ಕೊಂಕಣಿ. ಸುತ್ತಲಿನ ಭಾಷೆ ತುಳು. ಬರೆಯುವ ಭಾಷೆ ಕನ್ನಡ. ಇದರ ಫಲವಾಗಿ ಮೂಡಿಬಂದಿರುವ ಭಾಷಿಕ ಸಮ್ಮಿಶ್ರಣ ಕಾದಂಬರಿಯೂ ಪ್ರಾದೇಶಿಕತೆಯೊಂದನ್ನು ಹಿಡಿದಿಟ್ಟಿದೆಯೆನ್ನಬಹುದು.

ಕುವೆಂಪು ಅವರ ಕಾನೂರು ಸುಬ್ಬಮ್ಮ ಹೆಗ್ಗಡತಿ ಕಾದಂಬರಿಯು ಮಲೆನಾಡಿನ ಜೀವನ ಚಿತ್ರಣವನ್ನು ಆ ನೆಲೆದ ಪ್ರಾದೇಶಿಕ ವಿವರಗಳೊಂದಿಗೆ ನೀಡುವ ಅದ್ಭುತ ಕಲಾಕೃತಿಯಾಗಿದೆ. ಏಕಕಾಲಕ್ಕೆ ಈ ಕೃತಿಯು ಕನ್ನಡ ಗದ್ಯಕ್ಕಿರುವ ಅಭಿವ್ಯಕ್ತಿ ಸಾಮರ್ಥ್ಯವನ್ನು ಮತ್ತು ದೇಶೀಯ ಸೊಗಡನ್ನು ನಿರೂಪಿಸಬಹುದಾದ ಸಾಧ್ಯತೆಗಳನ್ನು ತೋರಿಸಿಕೊಟ್ಟ ಕೃತಿಯಾಗಿದೆ. ಅಷ್ಟೇ ಅಲ್ಲದೆ ಈ ನಿಟ್ಟಿನಲ್ಲಿ ಅತ್ಯಂತ ಯಶಸ್ವಿಯಾದ ಕೃತಿಯೆಂದು ಹೇಳಬಹುದಾಗಿದೆ. "ಒಂದು ಕೃತಿ ಸಂವಹನದ ದೃಷ್ಟಿಯಿಂದ ಪ್ರಾದೇಶಿಕತೆಯನ್ನು ಗಮನಿಸಬೇಕಾದ ಅವಶ್ಯಕತೆಯಿದೆ. ಅತಿಯಾದ ಪ್ರಾದೇಶಿಕಾಂಶ ಗಳಿಂದ ಕೃತಿ ಎಷ್ಟೇ ಉತ್ತಮವಾಗಿದ್ದರೂ ಕೃತಿಯ ಸಂವಹನಶೀಲತೆಗೆ ಭಂಗ ಬರುತ್ತದೆ. ಒಂದು ಪ್ರದೇಶದ ವಿಶಿಷ್ಟ ವಿವರಗಳು ಮತ್ತೊಂದು ಪ್ರದೇಶದ ಜನರಿಗೆ ಅಪರಿಚಿತವೆನಿಸುವುದರಿಂದ ಅವು ಅವನಿಗೆ ಅರ್ಥವಾಗುವುದಿಲ್ಲ. ಬದುಕಿನ ವಿವರಗಳನ್ನು ಅರ್ಥಮಾಡಿಕೊಳ್ಳಲು ಓದುಗನಿಗೆ ಹೊರಗಿನ ಸಹಾಯ ಬೇಕಾಗುತ್ತದೆ. ಈ ಹೊರಗಿನ ಸಹಾಯ ಕೃತಿಯನ್ನು ಜನಪ್ರಿಯಗೊಳಿಸಲು ತಡೆಯೊಡ್ಡುತ್ತದೆ. ಅಷ್ಟೇ ಅಲ್ಲ, ಆ ಕೃತಿಯ ವಸ್ತು ಎಷ್ಟೇ ಉತ್ತಮವಿದ್ದರೂ ಅದು ತನ್ನೆಲ್ಲ ಅರ್ಥವಂತಿಕೆ ಯೊಡನೆ ಓದುಗನಿಗೆ ಮುಟ್ಟುವುದಿಲ್ಲ. ಇದರಿಂದಾಗಿ ಕೃತಿಯ ಸಾಫಲ್ಯಕ್ಕೆ ಅರ್ಥವಂತಿಕೆಯೊಡನೆ ಓದುಗನಿಗೆ ಮುಟ್ಟುವುದಿಲ್ಲ. ಇದರಿಂದಾಗಿ ಕೃತಿಯ ಸಾಫಲ್ಯಕ್ಕೆ ಕುಂದುಬರುತ್ತದೆ. ಆದರೆ ಇಲ್ಲಿರುವ ಪ್ರಶ್ನೆ ಪ್ರಾದೇಶಿಕತೆಯನ್ನು ಬಳಸಿಕೊಂಡು ಸಂವಹನವನ್ನು ಕೂಡ ಸಾಧಿಸುವುದು ಹೇಗೆ? ಎಂಬುದು. ಈ ಪ್ರಶ್ನೆಗೆ ಉತ್ತರವೆಂಬಂತೆ ಕನ್ನಡದ ಸಂದರ್ಭದಲ್ಲಿ ಕುವೆಂಪು ಅವರು ಉತ್ತರವನ್ನು ಕಂಡಿದ್ದಾರೆ. ಒಬ್ಬ ಕಲಾವಿದ ಜನತೆಗಾಗಿ ಬರೆಯುತ್ತಾ ತನ್ನ ಕೃತಿಯನ್ನು ಶ್ರೇಷ್ಠ ಕೃತಿಯನ್ನಾಗಿ ಮಾಡಬಲ್ಲ ಶಕ್ತಿವಂತನಾಗಿರುತ್ತಾನೆಂಬುದಕ್ಕೆ ಇವರ ಕಾದಂಬರಿಗಳು ಉದಾಹರಣೆಯಾಗಿ ನಿಲ್ಲುತ್ತವೆ. ಮಲೆನಾಡಿನ ಬೆಟ್ಟಕಾಡು ಬಯಲು, ಸಮಾಜ ಜೀವನ, ಅದರ ಮೂಲೆ ಮಗ್ಗಲನ್ನು ಆರಿಸಿಕೊಳ್ಳುವ ಕುವೆಂಪು ಕಾದಂಬರಿಗಳು, ಅದೇ ಸಂದರ್ಭದಲ್ಲಿ ತಮ್ಮ ಪ್ರತಿಮಾ ಸೃಷ್ಟಿಯಲ್ಲಿ ಅದ್ಭುತ ಕಲೆಗಳಾಗಿ ನಿಲ್ಲುತ್ತವೆ. ಪ್ರತಿಯೊಂದು ವಿವರವು ವಿಶಿಷ್ಟಾರ್ಥ ಪಡೆದುಕೊಂಡು ನಿಲ್ಲುವ ರೀತಿ ಬೆರಗುಗೊಳಿಸುವಂತಹದ್ದು ಎನ್ನುವ ಅಭಿಪ್ರಾಯದೊಂದಿಗೆ ಏಕೀಭವಿಸಬಹುದಾಗಿದೆ.

ಪರಾಮರ್ಶನ ಗ್ರಂಥಗಳು

1. ಅಮರೇಶ ನುಗಡೋಣಿ, ಬಿಸಿಲ ಹನಿಗಳು, ಜಿಲ್ಲಾ ಸಾಹಿತ್ಯ ಪರಿಷತ್ ರಾಯಚೂರು 1995.
2. ಶಿವರಾಮ ಪಡಿಕ್ಕಲ್, ನಾಡು ನುಡಿಯ ರೂಪಕ ಮಂಗಳೂರು ವಿ.ವಿ ಪ್ರಸಾರಾಂಗ 2001.
3. ಸಿದ್ದಣ್ಣ ಬಿ ಉತ್ತನಾಳ, ಕನ್ನಡ ಕಾದಂಬರಿಗಳಲ್ಲಿ ಪ್ರಾದೇಶಿಕತೆ, ಅನುಪಮ ಪ್ರಕಾಶನ ಆಥಣಿ 1997.
4. ಓ.ಎಲ್. ನಾಗಭೂಷಣ ಸ್ವಾಮಿ, ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು 1989.
5. ಗಿರಡ್ಡಿ ಗೋವಿಂದರಾಜ್, ಕಾದಂಬರಿ ವಸ್ತು ಮತ್ತು ತಂತ್ರ, ಬಾಪ್ಕೋ ಪ್ರಕಾಶನ ಬೆಂಗಳೂರು 1976.